ಹೇಳುತ್ತಾಳೆ. ಆದರೆ ತನಗೆ ಅದು ಗೊತ್ತಾಗುವುದಿಲ್ಲ. ಆದರೆ ಹಾಗೆ ನಡೆಯುತ್ತಿರಬಹುದು. ನಿರ್ಮಲ ಇಲ್ಲದೆ ಎಲ್ಲವೂ ಖಾಲಿ ಖಾಲಿಯಾಗಿದೆ, ನಿರ್ವಾತ ಸ್ಥಿತಿ. ಎಷ್ಟೋ ಬಾರಿ ತನ್ನ ಧ್ವನಿ ಈ ನಿರ್ವಾತವನ್ನು ಮುಟ್ಟಿ ಮರಳಿ ಬರುವುದನ್ನು ಅವರು ಕೇಳಿದ್ದಾರೆ. ಅಂದರೆ ನಾನು ಕೂಡ ಹುಚ್ಚನಾಗಲು ಹೊರಟಿರಬಹುದೇ. ಅಭಿವ್ಯಕ್ತಿಸಲು ಅವಕಾಶ ನೀಡದಿದ್ದಾಗ ಒಳಗಿಂದೊಳಗೇ ಮಾತುಗಳ ಓಘವನ್ನು ತಡೆ ಹಿಡಿಯುವುದು ಹುಚ್ಚುತನ ಆಗಲಾರದೇ. ಬದುಕಿನ ಮೇಲೆ ಕವಿದಿರುವ ಏಕಾಂಗಿತನದ ನೆರಳಿನ ಪರಿಣಾಮ ಇದಾಗಿರಬಹುದೇ. ಅವರ ಯೋಚನೆ ಎಂದಿಗೂ ಮುಗಿಯುವಂತಹದಲ್ಲ... ನಿದ್ದೆಯಲ್ಲಿಯೂ.

ಈಗ ಚಾರುವಿಗೆ ವಯಸ್ಸು ಸುಮಾರು ನಲ್ವತ್ತಾಗಿರಬಹುದು. ನನಗೇ ಅರವತ್ತು ಕಳೆಯಿತು. ವರ್ಷಗಳು ನಿಲ್ಲುತ್ತವೆಯೇ? ಅವರು ಚಾರುವಿಗೆ ಎಷ್ಟೋ ಬಾರಿ ಹೇಳಿದ್ದಾರೆ, 'ಮದುವೆಯಾಗು. ಹೀಗೆ ಒಂಟಿಯಾಗಿ ಇರುವುದು ಸರಿಯಲ್ಲ.'




'ಮದುವೆಯಾಗುವುದು ಅತ್ಯವಶ್ಯವೇ? ಸಾಂಗತ್ಯಕ್ಕಾಗಿ ಮದುವೆಯಾಗಬೇಕೇ.'

'ನಿನಗೆ ಗೊತ್ತಿಲ್ಲವೇ? ಹುಟ್ಟಿದಾಗ ಮನುಷ್ಯ ಒಬ್ಬನೇ ಇರುತ್ತಾನೆ ಮತ್ತು ಸಾಯುವಾಗಲೂ ಒಬ್ಬನೇ. ಹಾಗೆಂದು ಈ ಎರಡು ಏಕಾಂಗಿತನದ ದಡಗಳ ನಡುವಿನ ಬದುಕು ಬೇರೆ ಯಾರದ್ದೋ ಆಗಿ ಕಳೆಯುವ ಆವಶ್ಯಕತೆ ಇರುತ್ತದೆ.'

'ಈ ಯಾರದೋ ಆಗುವುದು ಎಂಬುದು ಇದೆಯಲ್ಲಾ ಅದು ಸಂಬಂಧದ ಭ್ರಮೆ. ಅದನ್ನು ಹೊರತುಪಡಿಸಿ ಬದುಕಲು ಹುಡುಕಾಡುವ ಮನುಷ್ಯರೂ ಈ ಜಗತ್ತಿನಲ್ಲಿ ಇರುವುದು ಸಾಧ್ಯವಿದೆ. ಮನುಷ್ಯನ ಏಕಾಂಗಿತನದ ಸತ್ಯ ಅವನಿಗೆ ತಿಳಿದಿರಬಹುದು. ಒಮ್ಮೆ ಯಾವುದಾದರೂ ವಿಚಾರ ಬಹಿರಂಗವಾಯಿತೆಂದರೆ ಭ್ರಮೆ ಎನ್ನುವುದು ಯಾವುದು ಸರ್?'